## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀಮತಿ ಶಾಂಭವಿ ಕುಲಾಲ್, ಅಧ್ಯಕ್ಷರು ಮತ್ತು ಶ್ರೀ ಸುರೇಶ್ ಸರ್ವೇಗಾರ್, ಉಪಾಧ್ಯಕ್ಷರು, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43–ಎ ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1. ಅಪರ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ ಉಪಲೋಕ್/ಎಂವೈಎಸ್/3263/2015/ಪಿಪಿ, ದಿನಾಂಕ:21-02-2017.
2. ಸರ್ಕಾರದ ಸಮ ಸಂಖ್ಯೆಯ ಕಾರಣ ಕೇಳುವ ನೋಟೀಸು ದಿನಾಂಕ:14-03-2017.
3. ಶ್ರೀಮತಿ ಶಾಂಭವಿ ಕುಲಾಲ್, ಅಧ್ಯಕ್ಷರು, ಇವರು ಸರ್ಕಾರದ ಕಾರಣ ಕೇಳುವ ನೋಟೀಸಿಗೆ ನೀಡಿದ ಲಿಖಿತ ಹೇಳಿಕೆ ದಿನಾಂಕ:11-05-2017.
4. ಶ್ರೀ ಸುರೇಶ್ ಸರ್ವೇಗಾರ್, ಉಪಾಧ್ಯಕ್ಷರು, ಇವರು ಸರ್ಕಾರದ ಕೇಳುವ ನೋಟೀಸಿಗೆ ಲಿಖಿತ ಹೇಳಿಕೆ ಸಲ್ಲಿಸಿದ ದಿನಾಂಕ:20-04-2017.
5. ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸ್ ದಿನಾಂಕ:25-07-2017.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಉಡುಪಿ ಜಿಲ್ಲೆ ರವರ ವರದಿ ದಿನಾಂಕ:29-12-2017.

**ಪ್ರಸ್ತಾವನೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರು ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತ ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ ಪ್ರಕರಣ 12(3) ರ ಅಡಿಯಲ್ಲಿ ಸಲ್ಲಿಸಿರುವ ವರದಿಯಲ್ಲಿ,

ಪ್ರಕರಣದ ದೂರುದಾರರಾದ ಶ್ರೀ ಶೇಖರ್ ಕಲ್ಲಂಡೆ, ಇವರು ಲೋಕಾಯುಕ್ತ ಸಂಸ್ಥೆಗೆ ದೂರನ್ನು ಸಲ್ಲಿಸಿ, ಶ್ರೀಮತಿ ಶಾಂಭವಿ ಕುಲಾಲ್, ಅಧ್ಯಕ್ಷರು ಮತ್ತು ಶ್ರೀ ಸುರೇಶ್ ಸರ್ವೇಗಾರ್, ಉಪಾಧ್ಯಕ್ಷರು, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ(ಇನ್ನು ಮಂದೆ ಎದುರುದಾರರುಗಳು) ಇವರು ಶ್ರೀ ಸುಭಾಸ್‌ಚಂದ್ರ ಹೆಗ್ಗಡೆ ಹಾಗೂ ಅವರ ಪತ್ನಿ ಶ್ರೀಮತಿ ಸರಿತ ಹೆಗ್ಗಡೆರವರಿಗೆ ಅನುಕೂಲವಾಗುವಂತೆ ಅಂದಿನ ಕಾರ್ಯದರ್ಶಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿರವರುಗಳ ಶಿಫಾರಸ್ಸಿನ ಮೇಲೆ ಗ್ರಾಮ ಸಭೆ, ಸಾಮಾನ್ಯ ಸಭೆಯ ನಿರ್ಣಯವನ್ನು ತೆಗೆದುಕೊಂಡು ಪಿಂಕಿವೈನ್ಸ್ ಎಂಬ ಮದ್ಯ ಮಾರಾಟ ಅಂಗಡಿಯನ್ನು ತೆರೆಯಲು ಉದ್ದಿಮೆ ಪರವಾನೆಯನ್ನು ನೀಡಿರುತ್ತಾರೆ. ಉದ್ದಿಮೆ ಪ್ರಾರಂಭಿಸಬೇಕಾದ ಜಾಗವು/ನಿವೇಶನವು ಭೂ ಪರಿವರ್ತನೆ ಆಗಿಲ್ಲದಿದ್ದರು ಸುಳ್ಳು ದಾಖಲೆ ಸೃಷ್ಟಿಸಿ ಉದ್ದಿಮೆ ಪರವಾನಗೆಯನ್ನು ಮೀರಿರುತ್ತಾರೆ. ಎರಡನೇ ಎದುರುದಾರರು ಕಟ್ಟಡ ತೆರಿಗೆಯನ್ನು ಪಾವತಿಸಿಕೊಂಡಿರುತ್ತಾರೆ.

ಈ ಅಕ್ರಮದ ಬಗ್ಗೆ ಪೆರ್ಡೂರು ಗ್ರಾಮದ ನಿವಾಸಿಗಳಾದ ಶ್ರೀ ರಮೇಶ್ ಪೂಜಾರಿ ಹಾಗೂ ಶ್ರೀ ರಾಜ್ ಕುಮಾರ್ ಶೆಟ್ಟಿ ರವರುಗಳು ಮಾನ್ಯ ಉಪಲೋಕಾಯುಕ್ತರಿಗೆ ದೂರು ನೀಡಿ ಸದರಿ ಸುಭಾಷ್ ಚಂದ್ರ ಹೆಗ್ಗಡೆ ಹಾಗೂ ಅವರ ಪತ್ನಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಕೋರಿರುತ್ತಾರೆ. ಅದರಂತೆ ಸದರಿ ದಂಪತಿಗಳ ವಿರುದ್ಧ ಎಫ್‌ಐಆರ್ ಅನ್ನು ಸಲ್ಲಿಸಲಾಗಿರುತ್ತದೆ. ಈ ಎಲ್ಲಾ ಅಂಶಗಳು ಗ್ರಾಮ ಪಂಚಾಯಿಯ ಗಮನಕ್ಕೂಇದ್ದರೂ ಸಹ, ಎದುರುದಾರರುಗಳು ಮದ್ಯದ ಉದ್ದಿಮೆಯ ರದ್ದಾಗಿದ್ದ ಪರವಾನಗಿಯನ್ನು ಪುನಃ ಊರ್ಜಿತಗೊಳಿಸಲು ಸಾಮಾನ್ಯ ಸಭೆಯಲ್ಲಿ ಠರಾವು ಪಾಸ್ ಮಾಡಲು ಕ್ರಮ ಜರುಗಿಸಿ ಅದರಂತೆ ಠರಾವನ್ನು ಪಾಸ್ ಮಾಡಲಾಗಿರುತ್ತದೆ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಜರುಗಿಸುವಂತೆ ಕೋರಿದ್ದರು.

ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9ರಡಿ ಪ್ರದತ್ತವಾದ ಅಧಿಕಾದಂತೆ ತನಿಖೆ ನಡೆಸಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಎದುರುದಾರರುಗಳ ಆಕ್ಷೇಪಣೆಯನ್ನು

ಕರೆಯಲಾಗಿದ್ದು ತಮ್ಮ ವಿರುದ್ಧದ ಆರೋಪವನ್ನು ಅಲ್ಲಗಳೆದಿರುತ್ತಾರೆ. ಎದುರುದಾರರು ಸಲ್ಲಿಸಿದ ಆಕ್ಷೇಪಣೆ ಮೇರೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

ದೂರುದಾರರು ತಿಳಿಸಿರುವಂತೆ ಜೆಎಂಎಫ್‌ಸಿ ನ್ಯಾಯಾಲಯ ಉಡುಪಿಯಲ್ಲಿ ಶ್ರೀ ಸುಭಾಷ್‌ಚಂದ್ರ ಹೆಗ್ಗಡೆ ಮತ್ತು ಶ್ರೀಮತಿ ಸರಿತಾ ಹೆಗ್ಗಡೆ ಇವರ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಗ್ರಾಮ ಪಂಚಾಯಿತಿಗೆ ಪೆರ್ಡೂರು ಗ್ರಾಮದ ಸ.ನಂ.127/36ರ ನಿವೇಶನದ ಪೈಕಿ 0.10ಎಕರೆ ಜಾಗವನ್ನು ವಾಸ್ತವ್ಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿರುವುದಾಗಿ ಹಾಗೂ ತಹಸಿಲ್ದಾರ್ ಕಛೇರಿಯ ಸೀಲು ಹಾಗೂ ಸಹಿ ಇರುವ ನಕಲಿ ದಾಖಲೆಗಳನ್ನು ಸೃಷ್ಟಿಸಿ ಗ್ರಾಮ ಪಂಚಾಯಿತಗೆ ಸಲ್ಲಿಸಿರುವ ಬಗ್ಗೆ ಮತ್ತು ಪಿಂಕಿ ವೈನ್ಸ್ ಹೆಸರಿನಲ್ಲಿ ಮದ್ಯದಂಗಡಿಯ ಪರವಾನಗಿ ಪಡೆದಿರುವ ಬಗ್ಗೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿರುವುದು ಅವರು ಹಾಜರುಪಡಿಸಿರುವ ಎಫ್‌ಐಆರ್‌ನ ಪ್ರತಿಯಿಂದ ಕಂಡು ಬರುತ್ತದೆ. ಸದರಿ ಶ್ರೀ ಸುಭಾಷ್ ಚಂದ್ರ ಹೆಗ್ಗಡೆರವರ ಕಟ್ಟಡದ ಬಗ್ಗೆ ಅನೇಕ ತಕರಾರುಗಳು ಇದ್ದು, ಈ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಹಾಗೂ ಕ್ರಿಮಿನಲ್ ಪ್ರಕರಣವು ಜೆಎಂಎಫ್‌ಸಿ ನ್ಯಾಯಾಲಯ ಉಡುಪಿಯಲ್ಲಿ ವಿಲೇಗೆ ಬಾಕಿ ಇರುವುದು ಎದುರುದಾರರ ಆಕ್ಷೇಪಣೆಯಿಂದ ಸ್ಪಷ್ಟ ಪಡುತ್ತದೆ. ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ವಿಲೇಗೆ ಬಾಕಿ ಇರುವ ಹಿನ್ನೆಲೆಯಲ್ಲಿ ಎದುರುದಾರರುಗಳು ಶ್ರೀ ಸುಭಾಷ್‌ಚಂದ್ರ ಹೆಗ್ಗಡೆ ಮತ್ತು ಅವರ ಪತ್ನಿಯ ಪರವಾಗಿ ಠರಾವನ್ನು ಪಾಸು ಮಾಡಿರುವುದು ಸ್ಪಷ್ಟಪಡುತ್ತದೆ. ಇದು ಶ್ರೀ ಸುಭಾಷ್‌ಚಂದ್ರ ಹೆಗ್ಗಡೆ ಮತ್ತು ಅವರ ಪತ್ನಿಯವರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುವಂತ ಘೋರ ಪ್ರಕರಣ ವಿಲೇಗೆ ಬಾಕಿ ಇರುವ ಬಗ್ಗೆ ಗ್ರಾಮ ಪಂಚಾಯಿತಿ ಸಭೆಯಲ್ಲಿ ಎಲ್ಲರ ಗಮನಕ್ಕೂ ತಂದಿದ್ದರೂ ಸಹ ಹಾಗೂ ನ್ಯಾಯಾಲಯದಲ್ಲಿಸಿವಿಲ್ ಪ್ರಕರಣವು ವಿಲೇಗೆ ಬಾಕಿ ಇರುವಾಗ ಎದುರುದಾರರುಗಳು ನಿರ್ಣಯವನ್ನು ಕೈಗೊಂಡಿರುವುದು ನ್ಯಾಯಾ ಸಮ್ಮತವಲ್ಲವೆಂದು ಕಂಡು ಬರುತ್ತದೆ. ಎದುರುದಾರರುಗಳು ಸಾರ್ವಜನಿಕ ನೌಕರರು/ಚುನಾಯಿತ ಪ್ರತಿನಿಧಿಗಳಾಗಿರುವುದರಿಂದ ಇವರುಗಳ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯಡಿಯಲ್ಲಿ ಕ್ರಮವನ್ನು ಜರುಗಿಸಲು ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ.

ಅದರಂತೆ ಸರ್ಕಾರದಿಂದ ಮೇಲೆ ಓದಲಾದ (2)ರಲ್ಲಿ ಕಾರಣ ಕೇಳುವ ನೋಟೀಸನ್ನು ಶ್ರೀಮತಿ ಶಾಂಭವಿ ಕುಲಾಲ್, ಅಧ್ಯಕ್ಷರು ಮತ್ತು ಶ್ರೀ ಸುರೇಶ್ ಸರ್ವೇಗಾರ್, ಉಪಾಧ್ಯಕ್ಷರು, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರುಗಳಿಗೆ ಜಾರಿ ಮಾಡಲಾಯಿತು.

ಮೇಲೆ ಓದಲಾದ (3)ರ ಪತ್ರದಲ್ಲಿ ಶ್ರೀಮತಿ ಶಾಂಭವಿ ಕುಲಾಲ್, ಅಧ್ಯಕ್ಷರು, ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಅದರಲ್ಲಿನ ಪ್ರಮುಖ ಅಂಶಗಳು ಕೆಳಕಂಡಂತಿವೆ.

ಪೆರ್ಡೂರು ಗ್ರಾಮದ ಸರಿತ ಕೋಂ ಸುಭಾಶ್ ಚಂದ್ರ ಹೆಗ್ಗಡೆರವರು ಪೆರ್ಡೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕಟ್ಟಡ ನಂ.6.64 A1B ರಲ್ಲಿ ಪಿಂಕಿ ವೈನ್ಸ್ ಎಂಬ ಉದ್ದಿಮೆ ಸ್ಥಾಪಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ದಿನಾಂಕ:16-06-2016ರಂದು ನಡೆದ ಸಾಮಾನ್ಯ ಸಭೆಯ ನಿರ್ಣಯದಂತೆ ಪರವಾನಿಗೆ ನೀಡಲಾಗಿದೆ.

ಈ ಉದ್ದಿಮೆ ಸ್ಥಾಪಿಸಿದ ಕಟ್ಟಡಕ್ಕೆ ಸಂಬಂಧಿಸಿದಂತೆ, 2009ರಲ್ಲೆ ಅಂದಿನ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಕಟ್ಟಡ ಪರವಾನಿಗೆ ನೀಡಿರುತ್ತಾರೆ ಹಾಗೂ ಇದರಲ್ಲಿ ಸಿ.ಎಲ್.2(ಸನ್ನದು) ಉದ್ದಿಮೆ ನಡೆಸಲು ನಿರಕ್ಷೇಪಣಾ ಪತ್ರ ನೀಡಿರುತ್ತಾರೆ. ಲೋಕಾಯುಕ್ತ ವರದಿಯಲ್ಲಿ ದಿನಾಂಕ:23-09-2016ರಂದು ಸುಭಾಶ್ ಚಂದ್ರ ಹೆಗ್ಗಡೆರವರಿಗೆ ಕಟ್ಟಡ ಕಟ್ಟಲು ನಿರ್ಣಯ ತೆಗೆದುಕೊಂಡ ಬಗ್ಗೆ ಪ್ರಸ್ತಾಪವಾಗಿದ್ದು, ಸದರಿ ದಿನಾಂಕದಂದು ಅವರು ಸಾಮಾನ್ಯ ಸಭೆಯನ್ನು ಕರೆದಿರುವುದಿಲ್ಲ ಹಾಗೂ ಕಟ್ಟಡ ಪರವಾನಿಗೆಯನ್ನು ನೀಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (4)ರಲ್ಲಿ ಪತ್ರದಲ್ಲಿ ಶ್ರೀ ಸುರೇಶ್ ಸರ್ವೇಗಾರ್, ಉಪಾಧ್ಯಕ್ಷರು, ತಮ್ಮ ಲಿಖಿತ ಹೇಳಿಕೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಅದರಲ್ಲಿನ ಪ್ರಮುಖ ಅಂಶಗಳು ಕೆಳಕಂಡಂತಿವೆ.

ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿ ದಿನಾಂಕ:09-07-2015ರಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ನಿರ್ಣಯವು ನ್ಯಾಯಾ ಸಮ್ಮತ್ತವಲ್ಲವೆಂದು ಹೇಳಿರುತ್ತಾರೆ. ಆದುದರಿಂದ ದುರ್ನಡತೆ ಹಾಗೂ ತಲೆತಗ್ಗಿಸುವಂತಹ ನಡತೆಯನ್ನು ತೋರಿದ ಸದಸ್ಯರನ್ನು ತೆಗೆದು ಹಾಕಲು ಇರುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು

ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ಮತ್ತು 48(4)ರನ್ವಯ ಕ್ರಮ ತೆಗೆದುಕೊಳ್ಳಲು ಶಿಫಾರಸ್ಸು ಮಾಡಿರುವುದಿಲ್ಲ. ತಮಗೆ ಪರವಾನಗಿ ನೀಡುವ ಯಾವುದೇ ಅಧಿಕಾರ ಇರುವುದಿಲ್ಲ.

ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯ ಬಹುಮತದ ನಿರ್ಣಯವನ್ನು ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆಯಬೇಕಾಗಿರುತ್ತದೆ. ಪಿಂಕಿ ವೈನ್ ಎನ್ನುವ ಮದ್ಯ ಮಾರಾಟ ಉದ್ಯಮಿಯು ಕಾನೂನು ಬದ್ಧವಾಗಿಲ್ಲದಿದ್ದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಅಬಕಾರಿ ಜಿಲ್ಲಾಧಿಕಾರಿಯವರು ಸೂಕ್ತ ಕಾನೂನು ಕ್ರಮ ಕೈಗೊಂಡು ಸದರಿ ಲೈಸೆನ್ಸ್‌ನ್ನು ರದ್ದುಗೊಳಿಸುವ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ.

ಗ್ರಾಮ ಪಂಚಾಯತಿಯು ತನ್ನ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ಯಾವುದೇ ನಿರ್ಣಯ ನ್ಯಾಯಾ ಸಮ್ಮತವಲ್ಲವೆಂದು ಕಂಡು ಬಂದರೆ ಅಂತಹ ನಿರ್ಣಯವನ್ನು ರದ್ದುಪಡಿಸಬೇಕಾದರೆ ಅದರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 269ರಡಿಯಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಶ್ರೀ ಸುಭಾಷ್ ಚಂದ್ರ ಹೆಗ್ಗಡೆಯವರು 2009ರಿಂದಲೂ ಇದುವರೆಗೆ ಆಡಳಿತ ನಡೆಸಿದ ಎಲ್ಲಾ ಪಂಚಾಯತ್ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಕಟ್ಟಡ ಲೈಸೆನ್ಸ್ ನವೀಕರಣ ಮಾಡಿ ತೆರಿಗೆ ವಸೂಲಿ ಮಾಡಿರುತ್ತಾರೆ. 2015-16ರಲ್ಲಿ ಗ್ರಾಮ ಪಂಚಾಯತ್‌ನವರು ಯಾವುದೇ ಲೈಸೆನ್ಸ್ ಅಥವಾ ಉದ್ದಿಮೆ ಪರವಾನಗಿ ನೀಡಿರುವುದಿಲ್ಲ.

ಮೊದಲಿನಿಂದಲೂ ನಡೆಸಿಕೊಂಡುಬಂದಿದ್ದ ವ್ಯಾಪಾರ ಪರವಾನಗಿಯನ್ನು ಮತ್ತು ಕಟ್ಟಡ ಲೈಸೆನ್ಸ್‌ನ್ನು 2014ರಲ್ಲಿ ಗ್ರಾಮ ಪಂಚಾಯತ್ ಕಾನೂನುಬಾಹಿರವಾಗಿ ರದ್ದುಪಡಿಸಿದ ನಿರ್ಣಯ ಸರಿಯಲ್ಲ ಎಂದು ದಿನಾಂಕ: 09-07-2015ರ ಸಾಮಾನ್ಯ ಸಭೆಯ ನಿರ್ಣಯದಲ್ಲಿ ಹಿಂದಿನ ತಪ್ಪನ್ನು ಸರಿಪಡಿಸಿದ್ದೇ ಹೊರತು, ಹೊಸದಾಗಿ ಲೈಸೆನ್ಸ್ ನೀಡಿದ್ದಲ್ಲ. ಮೇಲಾಗಿ ನಿರ್ಣಯ ತೆಗೆದುಕೊಂಡ ಎಲ್ಲಾ ಸದಸ್ಯರು ಸದರಿ ನಿರ್ಣಯಕ್ಕೆ ಹೊಣೆಗಾರರಾಗಿರುತ್ತಾರೆ. ಸದರಿಯವರ ಯಾವುದೇ ಲೈಸೆನ್ಸ್ ಆಗಲಿ, ಕಟ್ಟಡ ನಂಬರ್ ಆಗಲಿ, ಮುಂತಾದ ಬಗ್ಗೆ ದಾಖಲೆ ಇಲ್ಲ ಮತ್ತು ಇದುವರೆಗೂ ಎಲ್ಲವು ಊರ್ಜಿತದಲ್ಲಿದೆ. ಮುಂದುವರೆದು ಅಬಕಾರಿ ಪರವಾನಗಿಯನ್ನು ನೀಡುವ ಅಧಿಕಾರ ಇರುವುದು ಮಾನ್ಯ ಜಿಲ್ಲಾಧಿಕಾರಿ ಮತ್ತು ಅಬಕಾರಿ ಜಿಲ್ಲಾಧಿಕಾರಿಯವರಿಗೆ ಹಾಗೂ ಈ ಬಾಬ್ತು ಮಾನ್ಯ ಜಿಲ್ಲಾಧಿಕಾರಿ ಮತ್ತು ಅಬಕಾರಿ ಜಿಲ್ಲಾಧಿಕಾರಿಯವರು 2009 ರಿಂದ ಇದುವರೆಗೂ ಲೈಸೆನ್ಸ್ ನವೀಕರಣ ಮಾಡುತ್ತಾ ಬರುತ್ತಿದ್ದಾರೆ. ಆದರೆ ದೂರುದಾರರು ತಾವೇ ಲೈಸೆನ್ಸ್ ನವೀಕರಣ ಮತ್ತು ಪರವಾನಗಿ ನೀಡಿರುತ್ತೇನೆ ಎನ್ನುವ ರೀತಿಯಲ್ಲಿ ದೂರನ್ನು ನೀಡಿರುತ್ತಾರೆ. ಸುಳ್ಳು ದೂರಿನ ಆಧಾರದಲ್ಲಿ ಮಾನ್ಯ ಉಪಲೋಕಾಯುಕ್ತರು ಯಾವುದೇ ದಾಖಲೆಗಳನ್ನು ಪರಿಶೀಲಿಸದೆ ವಿಚಾರಣೆಯನ್ನು ಮಾಡದೆ ವರದಿಯನ್ನು ತಯಾರಿಸಿದ್ದು, ಸದರಿ ವರದಿಯ ಆಧಾರದಲ್ಲಿ ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ಸುಳ್ಳು ದೂರುದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು ನ್ಯಾಯ ಒದಗಿಸಬೇಕಾಗಿ ಕೋರಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಉಡುಪಿ ಜಿಲ್ಲೆ ರವರ ದಿನಾಂಕ: 29-12-2017ರಂದು ಸಲ್ಲಿಸಿರುವ ವರದಿಯಲ್ಲಿ,-

- ಪೆರ್ಡೂರು ಗ್ರಾಮದ ಸರ್ವೆ ನಂ:127/36 ಅಂಶ 0.10 ಎಕರೆ ಸ್ಥಳವು ಶ್ರೀ ಸುಭಾಷ್ ಚಂದ್ರ ಹೆಗ್ಗಡೆ ಬಿನ್ ದಿವಂಗತ ಶಿವಪ್ಪ ಹೆಗ್ಗಡೆ ಯವರ ಸ್ವಂತ ಪಟ್ಟ ಸ್ಥಳವಾಗಿದ್ದು, ಅದರಲ್ಲಿ ಕಟ್ಟಡದ ರಚನೆಗೆ ಪರವಾನಗಿ ಕೋರಿ ಎಲ್ಲಾ ದಾಖಲೆಗಳನ್ನು ನೀಡಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದರಂತೆ ದಿನಾಂಕ:23-09-2009ರ ಸಾಮಾನ್ಯ ಸಭೆಯಲ್ಲಿ ಪರವಾನಿಗೆ ನಂಬರ:54/2009-10ರಂತೆ ಮಂಜೂರು ಮಾಡಲಾಗಿರುತ್ತದೆ. ಅದರಂತೆ ಸದರಿ ಕಟ್ಟಡಕ್ಕೆ ಕಟ್ಟಡ ನಂಬರ್:6/64 A1B ನೀಡಿ ಪ್ರತಿ ವರ್ಷ ಕಟ್ಟಡ ತೆರಿಗೆಯನ್ನು ಪಾವತಿಸಿಕೊಂಡು ಬರುತ್ತಿದ್ದಾರೆ.

- ದಿನಾಂಕ:27-05-2014ರಂದು ನಡೆದ ವಿಶೇಷ ಸಭೆಯಲ್ಲಿ ಶ್ರೀ ಸುಭಾಷ್‌ಚಂದ್ರ ಹೆಗ್ಗಡೆ ಇವರಿಗೆ 2009ರಲ್ಲಿ ಕಟ್ಟಡ ರಚನೆಗೆ ನೀಡಿರುವ ಪರವಾನಿಗೆ ನಂಬರ್:54/2009-10 ರದ್ದುಪಡಿಸುವಂತೆ ನಿರ್ಣಯವನ್ನು ಕೈಗೊಂಡಿರುತ್ತಾರೆ. ಸದರಿ ನಿರ್ಣಯದಲ್ಲಿ ಕಟ್ಟಡ ಲೈಸೆನ್ಸ್, ಡೋರ್ ನಂಬರ್

ಪಡೆಯುವುದಕ್ಕೆ ಸಲ್ಲಿಸಿರುವ ದಾಖಲೆಗಳು ನಕಲಿ ಎಂದು ತೀರ್ಮಾನಿಸಿ, ನೀಡಿರುವ ಪರವಾನಿಗೆಯನ್ನು ರದ್ದುಪಡಿಸುವರೇ ನಿರ್ಣಯ ನಂಬರ್:14/2014-15 ತೀರ್ಮಾನಿಸಿರುತ್ತಾರೆ.

- ಗ್ರಾಮ ಪಂಚಾಯತ್ ನಿರ್ಣಯಿಸಿದ ಕಾನೂನು ಬಾಹಿರ ನಿರ್ಣಯವನ್ನು ಪ್ರಶ್ನಿಸಿ ಮಾನ್ಯ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಶ್ರೀ ಸುಭಾಷ್‌ಚಂದ್ರ ಹೆಗ್ಗಡೆರವರು ಮೇಲ್ಮನವಿ ಸಂಖ್ಯೆ:1/2014 ರಂತೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 237(1)ರನ್ವಯ ಸಾಮಾನ್ಯ ಸಭೆಯ ನಿರ್ಣಯಕ್ಕೆ ತಡೆಯಾಜ್ಞೆ ನೀಡುವಂತೆ ಕೋರಿಕೊಂಡಿರುತ್ತಾರೆ. ಅದರಂತೆ ಪೆರ್ಡೂರು ಗ್ರಾಮ ಪಂಚಾಯತ್ ದಿನಾಂಕ:27-06-2014ರ ವಿಶೇಷ ಸಭೆಯ ನಿರ್ಣಯ ಸಂಖ್ಯೆ:14/2014-15ರ ನಿರ್ಣಯವನ್ನು ಅಮಾನತ್ತುಗೊಳಿಸಿ ಆದೇಶಿಸಿರುತ್ತಾರೆ.
- ಗ್ರಾಮ ಪಂಚಾಯತ್ ಚುನಾವಣೆ ನಂತರ 2014-15ನೇ ಸಾಲಿನಲ್ಲಿ ಗ್ರಾಮ ಪಂಚಾಯತ್ ಸಾಮಾನ್ಯ ಸಭೆ ದಿನಾಂಕ:09-07-2015ರಲ್ಲಿ ಸದರಿ ಕಟ್ಟಡಕ್ಕೆ 6 ವರ್ಷದ ಹಿಂದೆ ಲೈಸೆನ್ಸ್ ನೀಡಿ ಕಟ್ಟಡ ಸಂಖ್ಯೆ ನೀಡಿ ತೆರಿಗೆ ಪಾವತಿಸಿಕೊಂಡು ಬರುತ್ತಿರುವುದರಿಂದ ಈ ಹಿಂದೆ ಮಾಡಿದ ನಿರ್ಣಯ ಕಾನೂನು ಬಾಹಿರ ಮತ್ತು ಸಹಜ ನ್ಯಾಯಕ್ಕೆ ವಿರೋಧವಾಗಿದೆ ಎಂದು ಬಹುಮತದಿಂದ ನಿರ್ಣಯಿಸಲಾಗಿರುತ್ತದೆ. ಯಥಾಸ್ಥಿತಿ ಮುಂದುವರಿಸಿಕೊಂಡು ಹೋಗುವುದೆಂದು ಜಿಲ್ಲಾ ಪಂಚಾಯತ್ ಅಧ್ಯಕ್ಷರ ನ್ಯಾಯಾಲಯದ ಮೇಲ್ಮನವಿಯನ್ನು ಒಂದಕ್ಕೆ ಪಡೆಯುವುದೆಂದು ಬಹುಮತದಿಂದ ತೀರ್ಮಾನಿಸಿರುತ್ತಾರೆ. ಈ ಹಿಂದೆ ಆದ ನಿರ್ಣಯ:27-06-2014ಕ್ಕೆ ಆಗಿದ್ದು, ಈಗಿನ ನಿರ್ಣಯ:09-07-2015ಕ್ಕೆ ಆಗಿದ್ದು 6 ತಿಂಗಳಿಗಿಂತ ಜಾಸ್ತಿ ಅವಧಿ ಆಗಿರುತ್ತದೆ.
- ಗ್ರಾಮ ಪಂಚಾಯತ್ ಸದರಿ ಕಟ್ಟಡದಲ್ಲಿ ವೈನ್ ಶಾಪ್ ಉದ್ದಿಮೆ ನಡೆಸುವರೇ ದಿನಾಂಕ: 26-10-2009ರಂದು ನಿರಾಕ್ಷೇಪಣಾ ಪ್ರಮಾಣ ಪತ್ರ ಮಾತ್ರ ನೀಡಿವಾಗಿರುತ್ತದೆ. ಅದಕ್ಕೆ ಪೂರಕವಾಗಿ ಅಬಕಾರಿ ಇಲಾಖೆಯಿಂದ ನಿಯಮಾನುಸಾರ ಪರವಾನಿಗೆ ಪಡೆದುಕೊಂಡು ವ್ಯವಹಾರ ನಡೆಸಿಕೊಂಡು ಬರುತ್ತಿದ್ದಾರೆ. ಸದರಿ ಕಟ್ಟಡಕ್ಕೆ ಮೆಸ್ಕಾಂ ಇಲಾಖೆಯಿಂದ ವಿದ್ಯುತ್ ಸಂಪರ್ಕ ನೀಡಿದ್ದು, ಗ್ರಾಮ ಪಂಚಾಯತ್‌ಗೆ ಪ್ರತಿ ವರ್ಷ ಕಟ್ಟಡ ತೆರಿಗೆ ಪಾವತಿಸಿಕೊಂಡು ಬರುತ್ತಿದ್ದಾರೆ.
- ಸದರಿ ಪ್ರಕರಣದಲ್ಲಿ ಗ್ರಾಮ ಪಂಚಾಯತ್ ಕಟ್ಟಡ ಪರವಾನಿಗೆ ಪಡೆಯುವ ಸಂದರ್ಭದಲ್ಲಿ ನಕಲಿ ಭೂ ಪರಿವರ್ತನೆ ಆದೇಶವನ್ನು ಮಾನ್ಯ ತಹಶೀಲ್ದಾರರು ಉಡುಪಿ ಇವರಿಂದ ಪಡೆದುಕೊಂಡಿರುತ್ತಾರೆಂದು ಆಪಾದಿಸಿದ್ದು, ಸದರಿ ಕಟ್ಟಡ 2009ರಲ್ಲಿ ಪರವಾನಿಗೆ ನೀಡಿ ಕಟ್ಟಡ ನಿರ್ಮಾಣವಾಗಿ ಕಟ್ಟಡ ಸಂಖ್ಯೆ:6/64ಎ1ಬಿ ನೀಡಿದ ಕಟ್ಟಡವಾಗಿರುತ್ತದೆ. ಮುಂದಕ್ಕೆ 9/7/2015ರಲ್ಲಿ ನಡೆದ ಗ್ರಾಮ ಪಂಚಾಯತ್ ಸಭೆಯಲ್ಲಿ ಈ ಸಂಬಂಧದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಅದರಂತೆ ತೀರ್ಮಾನ ತೆಗೆದುಕೊಂಡಿರುವುದಾಗಿರುತ್ತದೆ ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ಪ್ರಕರಣ 237/1 ರಂತೆ ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಮೇಲ್ಮನವಿ ಪ್ರಾಧಿಕಾರವಾಗಿರುತ್ತಾರೆ. ಅದರಂತೆ ಮೇಲ್ಮನವಿ ಸಲ್ಲಿಸಲು ಅವಕಾಶವಿರುತ್ತದೆ.
- ದಿನಾಂಕ:09-07-2015ರ ನಿರ್ಣಯವು ಗ್ರಾಮ ಪಂಚಾಯತ್‌ನ ಬಹುಮತದ ನಿರ್ಣಯವಾಗಿರುತ್ತದೆ. ಈ ರೀತಿ ನಿರ್ಣಯ ಕೈಗೊಳ್ಳುವಾಗ ಗ್ರಾಮ ಪಂಚಾಯತ್‌ನ ಉಪಾಧ್ಯಕ್ಷರು ನಿರ್ಣಯದ ಪರವಾಗಿ ಮಾತನಾಡಿದ್ದಾಗ್ಯೂ ಅಂತಿಮ ನಿರ್ಣಯ ಗ್ರಾಮ ಪಂಚಾಯತ್‌ನದ್ದಾಗಿರುವುದರಿಂದ ಇಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರಾಗಲಿ,ಉಪಾಧ್ಯಕ್ಷರಾಗಲಿ ಅಥವಾ ಸದಸ್ಯರದ್ದಾಗಲಿ ಪಾತ್ರವಿರುವುದಿಲ್ಲ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 48ರಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನು ತೆಗೆದುಹಾಕುವಿಕೆಯ ಬಗ್ಗೆ ತಿಳಿಸಿದ್ದು, 48(4)ರಲ್ಲಿ ಕರ್ತವ್ಯ ನಿರ್ವಹಣೆಯಲ್ಲಿ ಅಲಕ್ಷ್ಯತೆ ತೋರಿಸಿದಕ್ಕಾಗಿ ಅಥವಾ ದುರ್ನಡತೆ ತೋರಿ ತಪ್ಪಿತಸ್ಥನಾಗಿರುವುದಕ್ಕೆ ತೆಗೆದುಹಾಕಬಹುದಾಗಿದ್ದು, ಮೇಲಿನ ಪ್ರಕರಣದಲ್ಲಿ ಅದು ಅನ್ವಯವಾವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ.

ಪ್ರಸ್ತಾವನೆಗಳು, ಶ್ರೀಮತಿ ಶಾಂಭವಿ ಕುಲಾಲ್, ಅಧ್ಯಕ್ಷರು ಮತ್ತು ಶ್ರೀ ಸುರೇಶ್ ಸರ್ವೆಗಾರ್, ಉಪಾಧ್ಯಕ್ಷರು, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ನೀಡಿರುವ ಲಿಖಿತ ಹೇಳಿಕೆಗಳನ್ನು ಹಾಗೂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಉಡುಪಿ ಜಿಲ್ಲೆರವರ ವರದಿಯನ್ನು ಪರಿಶೀಲಿಸಲಾಗಿದೆ. ಶ್ರೀಮತಿ ಶಾಂಭವಿ, ಅಧ್ಯಕ್ಷರು ಮತ್ತು ಶ್ರೀ ಸುರೇಶ್ ಸರ್ವೆಗಾರ್, ಉಪಾಧ್ಯಕ್ಷರು, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ರವರು ಪಿಂಕಿ ವೈನ್ಸ್ ನಡೆಸಲು ಕೇವಲ ನಿರಾಕ್ಷೇಪಣಾ ಪತ್ರ ನೀಡಿರುವುದು ಕಂಡುಬಂದಿರುತ್ತದೆ. ಸದರಿಯವರ ಯಾವುದೇ ಹಣ ದುರುಪಯೋಗಪಡಿಸಿಕೊಂಡಿರುವುದಿಲ್ಲ. ಆದುದರಿಂದ ಸದರಿಯವರಿಗೆ ಎಚ್ಚರಿಕೆ ನೀಡಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(4) ಮತ್ತು 43(ಎ) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 221 ಗ್ರಾಪಂಅ 2017,**

**ಬೆಂಗಳೂರು, ದಿನಾಂಕ:06-04-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಶಾಂಭವಿ ಕುಲಾಲ್, ಅಧ್ಯಕ್ಷರು ಮತ್ತು ಶ್ರೀ ಸುರೇಶ್ ಸರ್ವೆಗಾರ್, ಉಪಾಧ್ಯಕ್ಷರು, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ, ಇವರಿಗೆ ಎಚ್ಚರಿಕೆ ನೀಡಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(4) ಮತ್ತು 43(ಎ) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
6/4
(ಮುಬಾರಕ್ ಅಹ್ಮದ್),
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
2. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.
3. ಶ್ರೀಮತಿ ಶಾಂಭವಿ ಕುಲಾಲ್, ಅಧ್ಯಕ್ಷರು, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.
4. ಶ್ರೀ. ಸುರೇಶ್ ಸರ್ವೆಗಾರ್, ಉಪಾಧ್ಯಕ್ಷರು, ಪೆರ್ಡೂರು ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ
5. ಗಣಕ ಶಾಖೆ/ಕರ್ನಾಟಕ ವಿಕಾಸ
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.